# ‘ರಂಗಭೂಮಿಯಲ್ಲಿ ಬೇರುಬಿಟ್ಟು ಸಿನಿಮಾರಂಗದಲ್ಲಿ ಬೆಳೆಯುವೆ’

ರಂಗಭೂಮಿಯಿಂದ ಚಿತ್ರರಂಗದ ಅಂಗಳಕ್ಕೆ ಒಂದು ಹೆಜ್ಜೆಯಿಟ್ಟು ನಿಂತಿರುವ ಹುಡುಗ ಶ್ರೀದತ್ತ. ರಂಗಭೂಮಿಯ ಸತ್ವವನ್ನು ಉಣ್ಣುತ್ತಲೇ, ಸಿನಿಮಾಗಳಲ್ಲಿ ನಟನೆಯ ರುಚಿಯನ್ನೂ ಸವಿಯಬೇಕು ಎಂಬುದು ಅವರ ಹಂಬಲ.

■ ಪದ್ಮನಾಭ ಭಟ್

ಇತ್ತೀಚೆಗೆ ಅಮೆಜಾನ್ ಪ್ರೈಮ್‌ನಲ್ಲಿ ಬಿಡುಗಡೆಯಾದ ‘ಮ್ಯಾನ್ ಆಫ್ ದಿ ಮ್ಯಾಚ್’ ಸಿನಿಮಾದಲ್ಲಿ ಭೂಷಣ್ ಎಂಬ ಐಟಿ ಹುಡುಗನ ಪಾತ್ರವೊಂದು ಹಲವರ ಗಮನಸೆಳೆದಿದೆ. ಕೆಲವರಿಗೆ ಆ ಮುಖವನ್ನು ಎಲ್ಲೋ ನೋಡಿದ ಹಾಗಿದೆಯಲ್ಲ ಎಂದು ಅನಿಸಿರಲಿಕ್ಕೂ ಸಾಕು.

ಅವರ ಹೆಸರು ಶ್ರೀದತ್ತ. ಉತ್ತರ ಕನ್ನಡದ ಸಿರ್ಸಿಯ ವಾನಳ್ಳಿಯ ಶ್ರೀದತ್ತ ಓದಿದ್ದು ಪತ್ರಿಕೋದ್ಯಮ. ಪತ್ರಿಕೋದ್ಯಮವನ್ನು ಅಧ್ಯಯನ ಮಾಡುವಾಗಲೇ ರಂಗಭೂಮಿಯ ನಂಟೂ ಅಂಟಿಕೊಂಡಿತು. ಓದು ಮುಗಿಸಿ, ಅಲ್ಲಿಯೇ ಒಂದು ದಿನಪತ್ರಿಕೆಯಲ್ಲಿ ಪತ್ರಕರ್ತನಾಗಿ ಕೆಲಸಕ್ಕೆ ಸೇರಿಕೊಂಡಾಗ ಈ ರಂಗಭೂಮಿಯ ನಂಟು ಇನ್ನಷ್ಟು ಗಾಢವಾಯಿತು. ಅವರ ಸಹೋದ್ಯೋಗಿ ಆಗಿದ್ದ ಕೆ.ಆರ್. ಪ್ರಕಾಶ್ ಅವರ ನಾಟಕಗಳಲ್ಲಿ ನಟಿಸಿದರು. ಆದರೆ ನಾಟಕದಲ್ಲಿ ತನಗೆ ಮುಖ್ಯಪಾತ್ರವನ್ನು ಸಿಗುತ್ತಿಲ್ಲ ಎಂಬುದು ಶ್ರೀದತ್ತ ಅವರ ಕೊರಗು. ಮುಖ್ಯಪಾತ್ರವನ್ನು ನಿರ್ವಹಿಸುವಷ್ಟು ನಾನು ಒಳ್ಳೆಯ ನಟ ಆಗಿಲ್ಲವೇನೋ ಎಂಬ ಭಾವ ಅವರನ್ನು ಕುಗ್ಗಿಸುವ ಬದಲಿಗೆ ಛಲ ಹುಟ್ಟಿಸಿತು. ಮಾಡುತ್ತಿದ್ದ ಕೆಲಸಕ್ಕೆ ರಾಜೀನಾಮೆ ಸಲ್ಲಿಸಿ ಮೈಸೂರು ರಂಗಾಯಣ ಸೇರಿಕೊಂಡರು. ಅಲ್ಲಿ ಒಂದು ವರ್ಷದ ಡಿಪ್ಲೊಮಾ ಇನ್ ಥಿಯೇಟರ್ ಆರ್ಟ್ಸ್ ಮಾಡಿದರು. ನಂತರ ರಂಗಭೂಮಿ ಅವಕಾಶಗಳನ್ನೇ ಅರಸಿಕೊಂಡು ಬೆಂಗಳೂರು ಸೇರಿಕೊಂಡರು.

ಅಲ್ಲಿಯವರೆಗೆ ಶ್ರೀದತ್ತ ಅವರ ಗಮನವೆಲ್ಲ ರಂಗಭೂಮಿಯ ಕಡೆಗೇ ನೆಟ್ಟಿತ್ತು. ಆ ಕೆಲಸ ಅವರಿಗೆ ಖುಷಿಯನ್ನೂ ಕೊಡುತ್ತಿತ್ತು. ಆದರೆ ಬರಿಯ ಖುಷಿಯಿಂದ ಹೊಟ್ಟೆ ತುಂಬಲಾರದಲ್ಲ. ಹಾಗಾಗಿ ಜೀವನೋಪಾಯಕ್ಕಾಗಿ ಬೇರೆ ದಾರಿಗಳತ್ತ ಹೊರಳಿ ನೋಡುವುದು ಅನಿವಾರ್ಯವಾಯಿತು. ಅದೇ ಸಂದರ್ಭದಲ್ಲಿ ಅವರ ‘55 ನಿಮಿಷದ ಪ್ರೇಮಕಥೆ’ ಎಂಬ ಏಕವ್ಯಕ್ತಿ ನಾಟಕ ನೋಡಿದ ಒಬ್ಬರು ಖಾಸಗಿ ವಾಹಿನಿಯೊಂದರ ಧಾರಾವಾಹಿ ಆಡಿಷನ್‌ಗೆ ಅವರನ್ನು ಕಳುಹಿಸಿಕೊಟ್ಟರು. ಆಡಿಷನ್ ಕೊಟ್ಟ ಶ್ರೀದತ್ತ ಮುಖ್ಯಪಾತ್ರಕ್ಕೆ ಆಯ್ಕೆಯೂ ಆದರು. ‘ಮಹಾದೇವಿ’ ಎಂಬ ಧಾರಾವಾಹಿಯ ಮೂಲಕ ಅವರು ಕಿರುತೆರೆಗೆ ಪದಾರ್ಪಣೆ ಮಾಡಿದ್ದು ಹಾಗೆ. ಮುಂದಿನ ನಾಲ್ಕು ವರ್ಷಗಳ ಕಾಲ ಅವರು ಆ ಧಾರಾವಾಹಿಯಲ್ಲಿ ನಟಿಸಿದರು.

‘ಒಂದು ನಾಟಕವನ್ನು ತಾಲೀಮು ಮಾಡಿ, ಪಾತ್ರವನ್ನು ಪೂರ್ತಿಯಾಗಿ ಅರ್ಥ ಮಾಡಿಕೊಂಡು ಪ್ರದರ್ಶಿಸುತ್ತೇವೆ. ಆದರೆ ಧಾರಾವಾಹಿಗಳಲ್ಲಿ ಹಾಗಿರುವುದಿಲ್ಲ. ಅಲ್ಲಿ ತಾಲೀಮಿಗೆ ಹೆಚ್ಚು ಸಮಯ ಇರುವುದಿಲ್ಲ. ತಕ್ಷಣವೇ ಸನ್ನಿವೇಶವನ್ನು ಅರ್ಥ ಮಾಡಿಕೊಂಡು ನಟಿಸಬೇಕಾಗುತ್ತದೆ. ಆದರೆ ಭಾವಾಭಿವ್ಯಕ್ತಿ ಎಲ್ಲ ಕಡೆಗಳಲ್ಲಿಯೂ ಒಂದೇ ಆಗಿರುತ್ತದೆ’ ಎನ್ನುತ್ತಾರೆ ಶ್ರೀದತ್ತ.

